ಅನುಬಂಧ-2

ನಾಗರೀಕ ಸೌಲಭ್ಯಗಳನ್ನು ಒದಗಿಸಿರುವ ವಿವರ

೧) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ — ಇದರ ವ್ಯಾಪ್ತಿಯಲ್ಲಿ ಬರುವ ಜೋಗಿಪಾಳ್ಯ ರಾಗಿಗುಡ್ಡ ಅರಸು ಕಾಲೋನಿ ಕೊಳಚೆ ಪ್ರದೇಶಗಳಿಗೆ ಕುಡಿಯುವ ನೀರು ಪೂರೈಕೆ, ಒಳಚರಂಡಿ ನಿರ್ಮಾಣ, ಬೀದಿದೀಪ ಸ್ವಚ್ಛತೆ ಕಾರ್ಯಗಳನ್ನು ಒದಗಿಸಲಾಗಿದೆ. ಈ ಕೊಳಚೆ ನಿವಾಸಿಗಳ ಉಪಯೋಗಕ್ಕಾಗಿ ಸುಲಭ ಸೌಚಾಲಯಗಳ ಮುಖಾಂತರ ಸಾಮೂಹಿಕ ಸ್ನಾನ ಗೃಹ ಮತ್ತು ಸೌಚಾಲಯಗಳನ್ನು ಒದಗಿಸಲಾಗಿದೆ. ಅರಸು ಕಾಲೋನಿ ಕೊಳಚೆ ಪ್ರದೇಶದಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಮನೆಗಳನ್ನು ನಿರ್ಮಿಸಲು ಪರಿಶೀಲಿಸಲಾಗುತ್ತಿದೆ.

೨) ಬೆಂಗಳೂರು ಮಹಾನಗರ ಪಾಲಿಕೆ — ಅನುಬಂಧ-೧ರಲ್ಲಿ ಸೂಚಿಸಿರುವ ೯ ಕೊಳಚೆ ಪ್ರದೇಶಗಳ ರಸ್ತೆ ನಿರ್ಮಾಣ, ಬೀದಿದೀಪ, ಒಳಚರಂಡಿ. ನೀರು ಸರಬರಾಜು ವ್ಯವಸ್ಥೆ, ಸಾರ್ವಜನಿಕ ಶೌಚಾಗೃಹ, ಸಾರ್ವಜನಿಕ ನಲ್ಲಿಗಳು. ಇತ್ಯಾದಿಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯು ಒದಗಿಸುತ್ತಿದೆ. ಇವುಗಳ ಜೊತೆಗೆ ಅಂಗನವಾಡಿ ಕೇಂದ್ರಗಳನ್ನು ಕೆಲವು ಕೊಳಚೆ ಪ್ರದೇಶಗಳಲ್ಲಿ ಕಟ್ಟಲಾಗಿದೆ.

೩) ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ — ಅನುಬಂಧ-೧ರಲ್ಲಿ ಸೂಚಿಸಲಾಗಿರುವ ೨೮ ಕೊಳಚೆ ಪ್ರದೇಶಗಳ ರಸ್ತೆ, ಒಳಚರಂಡಿ, ನೀರು ಪೂರೈಕೆ, ಸ್ನಾನಗೃಹ ಬೀದಿದೀಪ ಸಮುದಾಯ ಶೌಚಾಗೃಹ ಮುಂತಾದವುಗಳನ್ನು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ಒದಗಿಸಿದೆ. ಇದಲ್ಲದೆ ತಾವರೆಕೆರೆ ಸ.ನಂ.೭ರಲ್ಲಿ ರೂ ೨೩.೦೬ ಲಕ್ಷ ಅಂದಾಜು ವೆಚ್ಚದಲ್ಲಿ ೧೨೮ ಮನೆಗಳನ್ನು ಮತ್ತು ಸರ್ವೆ ನಂ.೫೫ ರಲ್ಲಿ ರೂ. ೧೦.೧೬ ಲಕ್ಷ ಅಂದಾಜು ಮೊತ್ತದಲ್ಲಿ ಕೊಳಚೆ ನಿವಾಸಿಗಳಿಗಾಗಿ ಕಟ್ಟಲಾಗುತ್ತಿದೆ.

ಬಂಟ್ವಾಳದ ವಿದ್ಯುತ್ ಬಳಕೆದಾರರ ಸಹಕಾರಿ ಸಂಘದ ಬಗ್ಗೆ

೬೧೫. ಶ್ರೀ ರಮಾನಾಥ ರೈ (ಬಂಟ್ವಾಳ).— ಮಾನ್ಯ ಸಹಕಾರ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ .—

ಅ) ಬಂಟ್ವಾಳದಲ್ಲಿ ಪ್ರಾರಂಭವಾಗುತ್ತಿರುವ ವಿದ್ಯುತ್ ಬಳಕೆದಾರರ ಸಹಕಾರಿ ಸಂಘ ಯಾವ ಹಂತದಲ್ಲಿದೆ ;

ಆ) ಹಿರಿಯ ಸಹಕಾರಿ ಧುರೀಣರೊಬ್ಬರ ನೇತೃತ್ವದಲ್ಲಿ ಜನರಿಂದ ಪಾಲು ಬಂಡವಾಳ ಸಂಗ್ರಹಿಸಿ ಸಹಕಾರ ಸಂಘ ಸ್ಥಾಪಿಸಿ ಕಾರ್ಯಾರಂಭ ಮಾಡದಿರಲು ಕಾರಣವೇನು ;

ಇ) ಸರ್ಕಾರದ ನೇತೃತ್ವದಲ್ಲಿ ಕೆಲಸ ಮಾಡಬೇಕಾದ ಈ ಸಂಘವು ಕೆಲವು ಜನ ನಾಮ ನಿರ್ದೇಶಕರನ್ನು ಸರ್ಕಾರ ನೇಮಿಸಿ ಜಿಲ್ಲಾಧಿಕಾರಿಯವರನ್ನು ಅಧ್ಯಕ್ಷ ರನ್ನಾಗಿ ಮಾಡಿ ತಟಸ್ಥವಾಗಿರುವುದು ಯಾವ ಕಾರಣಕ್ಕಾಗಿ ?

ಶ್ರೀ ಹೆಚ್. ಆರ್. ರಾಜು (ಸಹಕಾರ ರಾಜ್ಯ ಮಂತ್ರಿಯವರು).—

ಅ) ಗ್ರಾಮೀಣ ವಿದ್ಯುತ್ ಸಹಕಾರ ಸಂಘ ಬಂಟ್ವಾಳ ಎಂಬ ಹೆಸರಿನಲ್ಲಿ ಸಂಘವು ನೋಂದಣಿಯಾಗಿದೆ ಮತ್ತು ಪ್ರಥಮ ಆಡಳಿತ ಮಂಡಳಿಯನ್ನು ಸಂಘದ ಉಪ ನಿಯಮದ ಪ್ರಕಾರ ನಾಮ ಕಾರಣ ಮಾಡಲಾಗಿದೆ ಹೊರತಾಗಿ ಯಾವ ಪ್ರಗತಿಯೂ ಸಾಧಿಸಿಲ್ಲ.

ಆ) ಗ್ರಾಮೀಣ ವಿದ್ಯುತ್ ಸಹಕಾರ ಸಂಘಗಳ ಯೋಜನಾ ವರದಿಗಳಿಗೆ ಗ್ರಾಮೀಣ ವಿದ್ಯುತ್ತೀಕರಣ ನಿಗಮ, ನಿಯಮಿತ ನವದೆಹಲಿ ಇವರಿಂದ ಇನ್ನೂ ಮಂಜೂರಾತಿ ದೊರಕಿಲ್ಲವಾದ್ದರಿಂದ ಕಾರ್ಯಾರಂಭ ಮಾಡಲು ಸಾಧ್ಯವಾಗಿಲ್ಲ.

ಹೊಳೆಹೊನ್ನೂರಿಗೆ ಸಬ್ ಇನ್ಸ್‌ಪೆಕ್ಟರ್ ಮಟ್ಟದ ಪೋಲೀಸ್ ಸ್ಟೇಷನ್ ಬಗ್ಗೆ

೬೨೫. ಶ್ರೀ ಕರಿಯಣ್ಣ (ಹೊಳೆ ಹೊನ್ನೂರು).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ —

ಅ) ಶಿವಮೊಗ್ಗ ಜಿಲ್ಲೆಯ ಹೊಳೆ ಹೊನ್ನೂರಿನಲ್ಲಿರುವ ಔಟ್‌ಪೋಲೀಸ್ ಸ್ಟೇಷನ್ ಅನ್ನು ಸಬ್‌ಇನ್ಸ್‌ಪೆಕ್ಟರ್ ಮಟ್ಟದ ಪೋಲೀಸ್ ಸ್ಟೇಷನನ್ನಾಗಿ ಪರಿವರ್ತಿಸುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆಯೆ;

ಆ) ಹಾಗಿದ್ದಲ್ಲಿ ಮೇಲಿನ ಪೋಲಿಸ್ ಸ್ಟೇಷನ್ ಅನ್ನು ಸಬ್‌ಇನ್ಸ್‌ಪೆಕ್ಟರ್ ಮಟ್ಟದ ಪೋಲೀಸ್ ಸ್ಟೇಷನನ್ನಾಗಿ ಪರಿವರ್ತಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

ಅ) ಹೌದು

ಆ) ಉದ್ಭವಿಸುವುದಿಲ್ಲ

ರಾಜ್ಯದ ಆಗ್ಮೆ ಜವಾನು ಖಾಯಂಗೊಳಿಸುವ ಬಗ್ಗೆ.

೬೨೬. ಶ್ರೀ ಕೆ. ಕುಶಾಲ (ಸುಳ್ಯ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ರಾಜ್ಯದಲ್ಲಿರುವ ಆಗ್ಮೆ ದರಖಾಸ್ತುದಾರರ ಸಂಖ್ಯೆ ಎಷ್ಟು ;

ಆ) ಈ ಬಗ್ಗೆ ದರಖಾಸ್ತುದಾರರು ಹೊಂದಿರುವ ಆಗ್ಮೆ ಜವಾನನ್ನು ಅವರಿಗೆ ಖಾಯಂ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೆ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಸಚಿವರು).—

ಅ) ದಿನಾಂಕ ೧-೧-೧೯೮೮ ರವರೆವಿಗೆ ರಾಜ್ಯದಲ್ಲಿರುವ ಆಗ್ಮೆ ದರಖಾಸ್ತುದಾರರ ಸಂಖ್ಯೆ ೩,೭೫,೦೦೬.

ಆ) ಹೌದು.

ಸಮಾಜ ಘಾತುಕ ಕೃತ್ಯಗಳಲ್ಲಿ ತೊಡಗಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳದಿರುವ ಬಗ್ಗೆ

೬೪೦. ಶ್ರೀಮತಿ ಮೋಟಮ್ಮ (ವಿರಾಜಪೇಟೆ).— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಿನಾಂಕ ೨೭-೩-೧೯೮೮ರಂದು ಬೆಂಗಳೂರು–ಬೇಗೂರು ಹೋಬಳಿಯ ಕೋಡಿಚಿಕ್ಕನಹಳ್ಳಿಯಲ್ಲಿ ೯ ಮನೆಗಳನ್ನು ನೆಲಸಮ ಮಾಡಲಾಗಿದೆಯೇ ;

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ;